



ನೀರಿನೊಳಗಿಂದ ಬೆಳೆದಿದ್ದ ಒಂದು ಮರದ ಕಾಂಡದ ಮೇಲೆ ಅದು ತನ್ನ ಪಾಡಿಗೆ ಸುಮ್ಮನೇ ಕುಳಿತಿತ್ತು. ಅದರ ಒಂದಷ್ಟು ಫೋಟೊಗಳನ್ನು ನಾವು ಗೆಳೆಯರು ಕ್ಲಿಕ್ಕಿಸಿದೆವು. ಸುಮಾರು ಇನ್ನೂರು ಅಡಿ ದೂರದಲ್ಲಿ ಕುಳಿತಿದ್ದ ಅದು ಬೆಳಗಿನ ಉಪಾಹಾರಕ್ಕಾಗಿ ಏನಾದರೂ ಸಿಗಬಹುದಾ ಎಂದು ನೀರಿನಲ್ಲಿ ಚಲಿಸುವ ಮೀನುಗಳ ಕಡೆಗೆ ನೋಡುತ್ತಿತ್ತು. ನಾವು ಆ ದೊಡ್ಡ ಗಿಡುಗನ ಫೋಟೊ ಕ್ಲಿಕ್ಕಿಸುತ್ತಿರುವಾಗಲೇ ಅನಿರೀಕ್ಷಿತವಾಗಿ ಅದೆಲ್ಲಿಂದಲೋ ಒಂದು ಬಿಳಿಗರುಡ **(Brahmini kite)** ಹಾರಿಬಂತು. ನನ್ನ ಕ್ಯಾಮೆರಾ ಕೂಡ ಅತ್ತ ತಿರುಗಿತು. ಕ್ಷಣ ಮಾತ್ರದಲ್ಲಿ ಅಪೂರ್ವ ದೃಶ್ಯವೊಂದು ಸಂಭವಿಸಿತು.

ಹಾರಿಬಂದ ಬಿಳಿಗರುಡ ನೀರಿನಿಂದ ಮೀನೊಂದನ್ನು ಬೇಟೆಯಾಡಿ ಮೇಲಕ್ಕೆ ಹಾರಿತು. ಅದರ ಒಂದೆರಡು ಚಿತ್ರಗಳು ನನ್ನ ಕ್ಯಾಮೆರಾದಲ್ಲಿ ಸೆರೆಯಾದವು. ಅಷ್ಟರಲ್ಲೇ ಬಿಳಿಗಿಡುಗ ತನ್ನ ಕಾಲುಗಳಲ್ಲಿ ಹಿಡಿದಿದ್ದ ಮೀನಿನ ಬೇಟೆಯನ್ನು ಬಿಡುತ್ತಿರುವುದೂ ನನಗೆ ಗೊತ್ತಿಲ್ಲದೇ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ‘ಇದೇನಿದು, ಈ ಬಿಳಿಗರುಡ ತನಗೆ ಸಿಕ್ಕಿದ ಬೇಟೆಯನ್ನು ಬಿಟ್ಟುಬಿಡುತ್ತಿದೆಯಲ್ಲ’ ಎಂದು ಆಶ್ಚರ್ಯವಾಯಿತು. ಆದರೆ, ಆಗಿದ್ದುದೇ ಬೇರೆ. ಸಮುದ್ರ ಹದ್ದು ಬಿಳಿಗರುಡನ ಮೇಲೆ ಕ್ಷಣ ಮಾತ್ರದಲ್ಲಿ ಆಕ್ರಮಣ ಮಾಡಿತ್ತು. ಗಾತ್ರ ಮತ್ತು ಶಕ್ತಿಯಲ್ಲಿ ಬಿಳಿಗರುಡಕ್ಕಿಂತ ಸಮುದ್ರ ಹದ್ದು ದೊಡ್ಡದು ಮತ್ತು ಅದರ ಶಕ್ತಿಯೂ ಹೆಚ್ಚು. ವಿಧಿಯಿಲ್ಲದೇ ಬಿಳಿಗರುಡ ತಾನು ಬೇಟೆಯಾಡಿದ್ದ ಮೀನನ್ನು ಬಿಟ್ಟು ತನ್ನನ್ನು ಕಾಪಾಡಿಕೊಳ್ಳಲು ದೂರ ಹಾರಿತ್ತು.

ದುರ್ಬಲರನ್ನು ಹೆದರಿಸಿ ಹಣ, ಒಡವೆ ದೋಚುವ ಪ್ರಸಂಗಗಳು ನಮ್ಮ ಸಮಾಜದಲ್ಲಿ ನಡೆಯುತ್ತವಷ್ಟೇ. ಆ ಪ್ರಸಂಗ ಪಕ್ಷಿಲೋಕದಲ್ಲೂ ನಡೆದಿತ್ತು. ಹದ್ದಿನ ಎದುರು ಮಣಿದ ಬಿಳಿಗರುಡ ವಿಧಿಯಿಲ್ಲದೇ ಬೇಟೆ ಬಿಟ್ಟುಕೊಟ್ಟಿತ್ತು. ಆ ಮಿಕ ನೀರಿನೊಳಗೆ ಮುಳುಗುವುದರೊಳಗಾಗಿ, ಈ ದೊಡ್ಡ ಹದ್ದು ಹಾರಿಬಂದು ಅದೇ ಮೀನನ್ನು ಎತ್ತಿಕೊಂಡು ಮೇಲೆ ಹಾರಿತು. ಹಕ್ಕಿ ಹಾರುವ ವೇಗಕ್ಕೆ ನನ್ನ ಕ್ಯಾಮೆರಾ ಫೋಕಸ್ ಆಗಲಿಲ್ಲವಾದ್ದರಿಂದ ಒಂದಷ್ಟು ಫೋಕಸ್ ಔಟ್ ಆದ ಚಿತ್ರಗಳು ಸೆರೆಯಾದರೂ ಆ ಹಕ್ಕಿ ಹಾರಿ ಹೋಗಿ ಮುಂದೆ ಮತ್ತೊಂದು ಜಾಗದಲ್ಲಿ ಕುಳಿತುಕೊಂಡಿದ್ದು ಕಣ್ಣಿಗೆ ಕಾಣಿಸಿತು. ನಮ್ಮ ದೋಣಿ ಅತ್ತ ಚಲಿಸಿತು. ದೂರದಿಂದಲೇ ಮೀನಿನ ಬೇಟೆಯೊಂದಿಗಿದ್ದ ಆ ಹಕ್ಕಿಯ ಒಂದಷ್ಟು ಚಿತ್ರಗಳನ್ನು ಸೆರೆಹಿಡಿದೆವು.

ಸೂರ್ಯ ಉದಯವಾಗಿ ದಿಗಂತದಿಂದ ನಿಧಾನವಾಗಿ ಮೇಲೆ ಬರುತ್ತಿರುವುದಕ್ಕೂ ಅದರ ಅಭಿಮುಖವಾಗಿ ಈ ಹಕ್ಕಿ ತನ್ನ ಬೇಟೆಯೊಂದಿಗೆ ಹಾರತೊಡಗಿತು. ಬಹುಶಃ, ಬೆಳ್ಳಂಬೆಳಗ್ಗೆ ಸಿಕ್ಕ ಮೃಷ್ಟಾನ್ನವನ್ನು ತನ್ನ ಮರಿಗಳಿಗೆ ಕೊಡಲು ಆ ಪಕ್ಷಿ ತೆಗೆದುಕೊಂಡು ಹೋಗುತ್ತಿರಬಹುದು ಎಂದು ಊಹಿಸಿದೆವು.

**ಪ್ರತಿಕ್ರಿಯಿಸಿ: feedback@suda.co.in**